# ಆಹಾ ಸುದ್ದಿ!

★ ಸಸಿತೋಟ



ಬ್ರಿಟನ್ನಿನ ಜೇಮ್ಸ್ ಬ್ರೌನ್‌ಗೆ ವ್ಯಾಕ್ಯೂಮ್ ಕ್ಲೀನರ್‌ಗಳನ್ನು ಸಂಗ್ರಹಿಸುವ ಹವ್ಯಾಸ. ವಿವಿಧ ಮಾದರಿಯ 322 ವ್ಯಾಕ್ಯೂಮ್ ಕ್ಲೀನರ್‌ಗಳನ್ನು ಮನೆಯಲ್ಲಿ ಗುಡ್ಡೆ ಹಾಕಿಕೊಂಡಿದ್ದಾನೆ. ಇಷ್ಟೊಂದು ಬಗೆಯ ಕ್ಲೀನರ್‌ಗಳಿದ್ದರೂ ಸ್ವತಃ ತನ್ನ ಮನೆಯನ್ನೇ ಕ್ಲೀನ್ ಮಾಡಲು ಬ್ರೌನ್‌ಗೆ ಸಾಧ್ಯವಿಲ್ಲ. ಕ್ಲೀನ್ ಮಾಡಲು ಜಾಗವೇ ಇಲ್ಲದಂತೆ ಪೇರಿಸಿಟ್ಟುಕೊಂಡಿದ್ದಾನಲ್ಲಾ!

ಅಮೆರಿಕದ ವಿಸ್ಕಿನ್‌ಸನ್‌ನಲ್ಲಿ 90ರ ವೃದ್ಧ 89ರ ವೃದ್ಧೆಯನ್ನು ಮದುವೆಯಾಗಲು ನಿರ್ಧರಿಸಿದ್ದಾನಂತೆ. ವೃದ್ಧಾಶ್ರಮದಲ್ಲಿರುವ ವೃದ್ಧ ಬಾರ್ಟೆಲ್ 89ರ ನೋವಾಕ್‌ಳನ್ನು ವರಿಸಲು ನಿರ್ಧರಿಸಿದಾಗ, 'ಮದುವೆ ಸ್ವರ್ಗದಲ್ಲೇ ನಿರ್ಧರಿಸಲ್ಪಟ್ಟಿರುತ್ತದೆ' ಎಂಬ ಮಾತು ನೆನಪಾಯ್ತಂತೆ. ಸ್ವರ್ಗಕ್ಕೆ ಅಡಿಯಿಡಲು ಸಿದ್ಧವಾಗುವ ಸಮಯದಲ್ಲೇ ನಿರ್ಧಾರವಾಗಿದ್ದಂತೂ ಹೌದು.

ದಕ್ಷಿಣ ಕೊರಿಯಾದಲ್ಲಿ ಆಹಾರ ಮೇಳದ ಪ್ರಚಾರಕ್ಕೆ ನಿಂತಿರುವ ಈ ವ್ಯಕ್ತಿ ಜೀವಂತ ಅಕ್ಟೋಪಸ್‌ಗಳನ್ನು ನುಂಗಿ ಎಲ್ಲರ ಗಮನ ಸೆಳೆದ. ಹರಿದಾಡುವ, ಹಾರಾಡುವ, ಈಜಾಡುವ ಜೀವಜಂತುಗಳನ್ನು ಬೇಯಿಸಿ, ಹುರಿದು, ರುಬ್ಬಿಕೊಂಡು ತಿನ್ನುವುದನ್ನು ಪ್ರಚಾರ ಮಾಡಿ ಮುಗಿಯಿತು. ಈಗ ಗ್ಯಾಸ್, ಕರೆಂಟ್ ಖರ್ಚಿಲ್ಲದೇ ತಿನ್ನುವ ಪ್ರಚಾರಕ್ಕೆ ವಸ್ತುವಾಗಿದೆ, ಫುಟ್ಬಾಲ್ ಪಂದ್ಯಗಳ ಭವಿಷ್ಯ ಹೇಳುವ ಮನೆತನದ ಈ ಜಲಚರ.



ಕೊಲಂಬಿಯಾದಿಂದ ತನ್ನೂರಿಗೆ ವಿಮಾನ ಹತ್ತಿದ ಈ ಕೆನಡಾದ ಮಹಿಳೆಯ ತುಂಬಿದ ಹೊಟ್ಟೆಯನ್ನು ಕಸ್ಟಮ್ಸ್‌ನಲ್ಲೇ ನೀಟಾಗಿ ಕಿತ್ತು ಇಡಬೇಕಾಯಿತು. ಕೊಲಂಬಿಯಾ ಎಂದರೆ ಹೇಳಿಕೇಳಿ ಮಾದಕ ದ್ರವ್ಯಗಳ ಸ್ವರ್ಗ. ರುಚಿಗೆಂದು ಕೊಂಚ ಹೊಟ್ಟೆಗೆ ತೆಗೆದುಕೊಳ್ಳುವ ಬದಲು 2 ಕೆಜಿ ಕೊಕೇನ್ ತುಂಬಿದ ಕೃತಕ ಹೊಟ್ಟೆಯನ್ನೇ ಕಟ್ಟಿಕೊಂಡು ಗರ್ಭಿಣಿ ಎಂದು ನಾಟಕವಾಡಿದಳಂತೆ. ಡಿಟೆಕ್ಟರ್‌ಗೆ ಮಗುವಿನ ಹೃದಯದ ಬಡಿತದ ಬದಲು ಕೊಕೇನ್ ವಾಸನೆ ಬಡಿಯಬೇಕೆ! ಶಸ್ತ್ರಚಿಕಿತ್ಸೆಗೆ ತೊಡಗಿದವರಿಗೆ ಹೊಟ್ಟೆಯೇ ಕಿತ್ತು ಬಂದಾಗ ಹೃದಯವೇ ಬಾಯಿಗೆ ಬಂದಿರಬಹುದು.



ಫ್ಲಾರಿಡಾದ ಮಹಿಳೆ ಕ್ರಿಸ್ತಿನಾ ಇತ್ತೀಚೆಗೆ ರಸ್ತೆಯ ಬದಿ ನಿಂತು ಭಿಕ್ಷೆ ಬೇಡಲಾರಂಭಿಸಿದಳು. ಉಳಿದುಕೊಳ್ಳಲು ಮನೆ ಇಲ್ಲವೇನೋ, ತಿನ್ನಲಿಕ್ಕೆ ಆಹಾರ ಇಲ್ಲದೇ ಇರಬಹುದು ಎಂದು ಜನ ಭಿಕ್ಷೆ ಹಾಕಲು ಹತ್ತಿರ ಬಂದರೆ ಆಕೆ ಇಟ್ಟುಕೊಂಡಿದ್ದ ಬೋರ್ಡ್ ನೋಡಿ ಮುಖ ತಿರುವಿದರಂತೆ. ಭಾರಿ ಎದೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಈ ಭಿಕ್ಷೆ ಎಂದು ಬೋರ್ಡ್ ಹಾಕಿಕೊಂಡಿದ್ದಳಂತೆ ಎದೆಗಾರ್ತಿ ಕ್ರಿಸ್ತಿನಾ.

ಚೀನಾದಲ್ಲಿ ಜನಸಂಖ್ಯೆ ಹೆಚ್ಚಾದಂತೆ ಮನೆಗಳನ್ನು ಕಟ್ಟಲು ಸರ್ಕಾರ ಎಲ್ಲೆಲ್ಲೋ ಜಾಗ ಹುಡುಕುತ್ತಿದೆ. ಕಳೆದ ತಿಂಗಳು ವಿಹಾರದ ಮೇಲೆ ವಿಲ್ಲಾ ಕಟ್ಟಿ ಸುದ್ದಿ ಮಾಡಿತ್ತು. ಈಗ ಕಾರ್ಖಾನೆಯ ಮೇಲೆ ಮನೆಗಳನ್ನು ಕಟ್ಟುವ ಸಾಹಸ ಮಾಡಿದೆ. ಅದೂ ಡಿಸೈನರ್ ಮನೆಗಳು. ಸುಮ್ಮನೆ ಗಗನಚುಂಬಿ ಕಟ್ಟಡಗಳನ್ನು ಕಟ್ಟುವ ಬದಲು ಇದೇನು ಹೊಸ ಕರಾಮತ್ತೋ ಗೊತ್ತಿಲ್ಲ.

